# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 5827 / 2022

ಪಿರ್ಯಾದುದಾರರು ಃ ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು ಃ ಸಂತೋಷ**

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | **ದೊಡ್ಡರಂಗೇಗೌಡ** |
| ತಂದೆಯ / ಗಂಡನ ಹೆಸರು | **ಗಂಗಸ್ವಾಮಯ್ಯ** |
| ವಯಸ್ಸು | **34** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಸಿದ್ದಾಪುರ** |

**ದಿನಾಂಕಃ 08-08-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-2 ರಿಂದ ಚಾಸಾ-9 ನನಗೆ ಗೊತ್ತು. ಮೃತವೆಂಕಟಸ್ವಾಮಯ್ಯ ಅಲಿಯಾಸ್ ಭೀಮಣ್ಣ ನನಗೆ ಗೊತ್ತು, ಅವರು ನನ್ನ ತಂದೆ. ದಿಃ 12-03-2022 ರಂದು ಸಂಜೆ 5.15 ಗಂಟೆಯ ಸಮಯದಲ್ಲಿ ನನ್ನ ತಂದೆ ಕೆಎ-42-ಆರ್-9762 ಟಿವಿಎಸ್ ಎಕ್ಸ್‌ಎಲ್ ದ್ವಿಚಕ್ರ ವಾಹನದಲ್ಲಿ ಸಿದ್ದಾಪುರದಿಂದ ರಸ್ತೆಪಾಳ್ಯಕ್ಕೆ ಹೋಗಿದ್ದರು, ಸದರಿ ಸ್ಥಳದಲ್ಲಿ ನನ್ನ ತಂದೆಯು ಯುಟರ್ನ್ ತೆಗೆದುಕೊಳ್ಳಲು ರಸ್ತೆಯ ಬಳಿ ನಿಲ್ಲಿಸಿದ್ದು, ಎನ್.ಹೆಚ್-75 ರಸ್ತೆಯ ಬೆಂಗಳೂರು ಕಡೆಯಿಂದ ಬಂದ ಒಂದು ವರುಣಾ ಕಾರು ಕೆಎ-51-ಎಂಡಿ-8347 ವಾಹನವನ್ನು ಅತಿವೇಗ ಮತ್ತು

ಅಜಾಗರೂಕತೆಯಿಂದ ಬಂದು ನನ್ನ ತಂದೆಯ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತದೆ. ಚಾಸಾ-9 ರವರು ಸದರಿ ವಿಚಾರವನ್ನು ನನಗೆ ಪೋನ್ ಮೂಲಕ ತಿಳಿಸಿದ್ದು, ನಾನು ಅಪಘಾತದ ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ವಿಚಾರ ನಿಜವಾಗಿರುತ್ತದೆ. ನನ್ನ ತಂದೆಯವರಿಗೆ ಅಪಘಾತದಿಂದಾಗಿ ಕಾಲು ಮುರಿದು ಹೋಗಿ, ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಅಪಘಾತ ಪಡಿಸಿದ ಕಾರು ಸಹ ಸ್ಥಳದಲ್ಲಿಯೇ ನಿಂತ್ತಿತ್ತು. ಅಪಘಾತದ ಸಂಬಂಧ ನಾನು ಕುದೂರು ಪೋಲಿಸರಿಗೆ ಸಂಜೆ 7.30 ಗಂಟೆಯ ಸಮಯದಲ್ಲಿ ದೂರು ದಾಖಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ದೂರು ಆಗಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

2. ನಿಪಿ-1 ದೂರಿನ ಆಧಾರದ ಮೇಲೆ ಕುದೂರು ಪೋಲಿಸರು ಅಪಘಾತವಾದ ಮಾರನೇ ದಿವಸ ಅಪಘಾತದ ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿ ಸ್ಥಳವನ್ನು ನಾನು ತೋರಿಸಿದ್ದು, ಸದರಿ ಮಹಜರ್ ಸಮಯದಲ್ಲಿ ನಾನು, ಚಾಸಾ-7 ಮತ್ತು 8 ಹಾಜರಿದ್ದು, ಪೋಲಿಸರು ನಮ್ಮಗಳ ಸಮಕ್ಷಮ ಸಂಜೆ 4.30 ರಿಂದ 5 ಗಂಟೆಯವರೆಗೆ ಮಹಜರ್ ಕ್ರಮ ಅನುಸರಿಸಿ, ಅಪಘಾತ ಪಡಿಸಿದ ಹಾಗೂ ಅಪಘಾತ ಒಳಗಾದ ವಾಹನಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಮಹಜರ್ ಆಗಿದ್ದು, ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಆರು ಪೋಟೋಗಳನ್ನುತೋರಿಸಲಾಗಿ, ಸಾಕ್ಷಿ

ಅವುಗಳನ್ನು ನೋಡಿ ಗುರುತಿಸಿದ್ದು, ಕಾರಿನ ಪೋಟಗಳನ್ನು ಕ್ರಮವಾಗಿ ನಿಪಿ-3 ಮತ್ತು ನಿಪಿ-4 ಎಂದು, ಬೈಕಿನ ಪೋಟೋಗಳನ್ನು ನಿಪಿ-5 ಮತ್ತು ನಿಪಿ-6 ಎಂದು, ಸ್ಥಳ ಮಹಜರಿನಲ್ಲಿ ತೆಗೆದ್ದಂತಹ ಪೋಟೋಗಳನ್ನು ನಿಪಿ-7 ಮತ್ತು ನಿಪಿ-8 ಎಂದು, ಮೃತ ನನ್ನ ತಂದೆಯ ಎರಡು ಪೋಟೋಗಳನ್ನು ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಕೆ.ಎನ್.ಎ.** ವಕೀಲರಿಂದ **ಆರೋಪಿ** ಪರವಾಗಿ ಃ-

ನಮ್ಮ ತಂದೆಯವರು ರಸ್ತೆಪಾಳ್ಯಕ್ಕೆ ಹೋಗಲು ಮನೆಯನ್ನು ಸುಮಾರು ಸಂಜೆ 5 ರಿಂದ 5.30 ರ ಸಮಯದಲ್ಲಿ ಬಿಟ್ಟಿರುತ್ತಾರೆ. ಅಪಘಾತವಾಗಿದೆ ಎಂದು ಸಂಜೆ 5.20 ರ ಸಮಯದಲ್ಲಿ ಚಾಸಾ-9 ರವರು ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ನಮ್ಮ ಮನೆಗೂ ಹಾಗೂ ಅಪಘಾತವಾದ ಸ್ಥಳಕ್ಕೂ ಸುಮಾರು ಎರಡುವರೆ ಕಿ.ಮೀ. ಅಂತರವಿರುತ್ತದೆ, ಸುಮಾರು 5 ನಿಮಿಷಗಳಲ್ಲಿ ಅಪಘಾತವಾದ ಸ್ಥಳಕ್ಕೆ ನಮ್ಮ ಮನೆಯಿಂದ ತಲುಪಬಹುದು. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ, ಆದರೆ ಚಾಸಾ-9 ರವರು ನನಗೆ ಕರೆ ಮಾಡಿ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನನ್ನ ತಂದೆಯವರು ಡಿ.ಎಲ್. ಪಡೆದುಕೊಂಡಿರುವುದಿಲ್ಲ. ನಿಪಿ-1 ದೂರಿನಲ್ಲಿ ಚಾಸಾ-9 ಗಿರೀಶ್ ರವರು ನನಗೆ ಕರೆ ಮಾಡಿ, ಅಪಘಾತವಾದ ವಿಚಾರವನ್ನು ತಿಳಿಸಿರುತ್ತಾರೆಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ-7 ಮತ್ತು ನಿಪಿ-8 ರಲ್ಲಿ ನೀವು ತೋರಿಸಿರುವ ಸ್ಥಳ ದಲ್ಲಿ ಯಾವುದೇ ಜಿಬ್ರಾ ಕ್ರಾಸಿಂಗ್ ಇರುವುದಿಲ್ಲ ಎಂದರೆ ಸಾಕ್ಷಿ ಇದೇ ಎಂದು ನುಡಿಯುತ್ತಾರೆ. ನೀವು ನಿಪಿ-7 ಮತ್ತು ನಿಪಿ-8 ರಲ್ಲಿ ನಿಂತ್ತಿರುವ ಸ್ಥಳಕ್ಕೂ ಮತ್ತು ಜಿಬ್ರಾ ಕ್ರಾಸಿಂಗಿಗೂ 50 ಮೀಟರ್ ಇರುತ್ತದೆಂದರೆ ಸರಿಯಲ್ಲ. ನಿಮ್ಮ ತಂದೆಯವರಿಗೆ ಗಾಡಿ ಓಡಿಸಲು ಬರುತ್ತಿರಲಿಲ್ಲ, ಆಗಾಗಿ ಅವರೇ ಹೋಗಿ ಬಿದ್ದು ಅಪಘಾತ ಮಾಡಿಕೊಂಡು ಮೃತ ಪಟ್ಟಿರುತ್ತಾರೆಂದರೆ ಸರಿಯಲ್ಲ. ವರುಣಾ ಕಾರಿಗೂ ಮತ್ತು ಈ ಅಪಘಾತಕ್ಕೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ನೀವು ಎಂ.ವಿ.ಸಿ. ಪ್ರಕರಣ ಹೂಡಿ ಪರಿಹಾರ

**ಸಿ.ಸಿ. ಸಂಖ್ಯೆಃ 5827 / 2022**
**ಚಾಸಾ-01 / ಪ್ರಾಸಾ-01**

ಪಡೆದುಕೊಳ್ಳುವುದಕ್ಕೆ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

2. ಠಾಣೆಯಲ್ಲಿ ನಾನೇ ನಿಪಿ-1 ದೂರನ್ನು ಬರೆದು ನೀಡಿರುತ್ತೇನೆ. ನಿಪಿ-1 ದೂರು ಕೈ ಬರಹದ್ದಲ್ಲ, ಅದು ಟೈಪ್ ಆಗಿರುತ್ತದೆಂದರೆ ಸಾಕ್ಷಿ ಸಹಿ ನಾನೇ ಮಾಡಿರುತ್ತೇನೆಂದು ನುಡಿಯುತ್ತಾರೆ. ನಿಪಿ-1 ದೂರನ್ನು ಪೋಲಿಸರು ಮತ್ತು ನೀವು ಸೇರಿ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-2 ಮಹಜರಿನಲ್ಲಿರುವ ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸ್ಥಳ ಮಹಜರ್ ಜಾಗದಲ್ಲಿ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಗಂಗಸ್ವಾಮಯ್ಯ ನಿಪಿ-2 ಮಹಜರಿನಲ್ಲಿ ಏನು ಬರೆದಿದೆಂದು ನಿಮಗೆ ಗೊತ್ತಿಲ್ಲ, ಪೋಲಿಸರು ನಿಮಗೆ ಅದನ್ನು ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮಹರಿಗೆ ಖಾಲಿ ಕಾಗದಕ್ಕೆ ನಿಮ್ಮ ಸಹಿ ಪಡೆದುಕೊಂಡು ಪೋಲಿಸರು ಠಾಣೆಯಲ್ಲಿ ಮಹಜರನ್ನು ಬರೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಸ್ಥಳ ಮಹಜರಿಗೆ ಬರಲು ನಿಮಗೆ ನೋಟಿಸ್ ನೀಡಿದ್ದರಾ ಎಂದರೆ ಸಾಕ್ಷಿ ಕರೆ ಮಾಡಿ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಅಪಘಾತವಾದ ಸ್ಥಳದಲ್ಲಿ ಜಖಂಗೊಂಡಿದ್ದ ವರುಣಾ ವಾಹನವನ್ನು ಮತ್ತು ದ್ವಿಚಕ್ರ ವಾಹನವನ್ನು ಪೋಲಿಸರು ಅಮಾನತು ಪಡಿಸಿಕೊಂಡಿರುತ್ತಾರೆಂಬ ವಿಚಾರ ಸಹ ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ನಿಮ್ಮ ತಂದೆಯವರು ಅಜಾಗರೂಕತೆಯಿಂದ ಅಪಘಾತವಾಗಿದ್ದರೂ ಸಹ ಅಪಘಾತ ಪರಿಹಾರ ಪಡೆದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**

**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 5827 / 2022**

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಸಂತೋಷ**

**ಚಾಸಾ :- 09 / ಪ್ರಾಸಾ :- 02**

| | |
|---|---|
| ಹೆಸರು | **ಗೀರೀಶ** |
| ತಂದೆಯ / ಗಂಡನ ಹೆಸರು | **ಗಂಗಾಧರ** ಗಂಗಸ್ವಾಮಯ್ಯ |
| ವಯಸ್ಸು | **45** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ರಸ್ತೆಪಾಳ್ಯ** |

**ದಿನಾಂಕ: 08-08-2023 ರಂದು** ಸಾಕ್ಷಿಯನ್ನು ಗಂಗಸ್ವಾಮಯ್ಯ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರಿಂದ ಚಾಸಾ-8 ರವರು ನನಗೆ ಗೊತ್ತು, ಮೃತ ಗಂಗಸ್ವಾಮಯ್ಯ ನನಗೆ ಗೊತ್ತು. ದಿ: 12-03-2022 ಸಂಜೆ 5.15 ರ ಸಮಯದಲ್ಲಿ ನಾನು ರಸ್ತೆಪಾಳ್ಯದ ಹಾಲಿನ ಡೈರಿನ ಬಳಿ ಇದ್ದಂತಹ ಸಮಯದಲ್ಲಿ ಗಂಗಸ್ವಾಮಯ್ಯ ಎಕ್ಸ್‌ಎಲ್ ದ್ವಿಚಕ್ರ ವಾಹನವಾದ ಕೆಎ-42-ಆರ್-9762 ಯುಟರ್ನ್ ತೆಗೆದುಕೊಳ್ಳಲು ನಿಂತ್ತಿದ್ದಾಗ ಬೆಂಗಳೂರು ಕಡೆಯಿಂದ ಮಂಗಳೂರು ಹೋಗುತ್ತಿದ್ದಂತಹ ಕೆಎ-51-ಎಂ.ಡಿ-8347 ವರುಣಾ ಕಾರು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತದೆ. ಅಪಘಾತ ಪರಿಣಾಮ ಗಂಗಸ್ವಾಮಯ್ಯನವರಿಗೆ ತಲೆಗೆ, ಕಾಲು ಮುರಿದು, ಕೈ ಕಾಲುಗಳಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ

ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನಾನು ಅಪಘಾತದ ವಿಚಾರವನ್ನು ಫೋನ್ ಮೂಲಕ ಚಾಸಾ-1 ರವರಿಗೆ ತಿಳಿಸಿರುತ್ತೇನೆ. ನಂತರ ಚಾಸಾ-1 ರವರು ಅಪಘಾತದ ಸ್ಥಳಕ್ಕೆ ಬಂದರು. ನಂತರ ಮೃತರನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ರವಾನಿಸಿರುತ್ತೇವೆ. ವರುಣಾ ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆಂದು, ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ, ಆ ದಿನ ಕಾರು ಚಾಲನೆ ಮಾಡುತ್ತಿದ್ದ ವ್ಯಕ್ತಿಯೇ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಆಗಿರುತ್ತಾರೆಂದು ನುಡಿಯುತ್ತಾರೆ. ಅಪಘಾತ ಪಡಿಸಿದ ಹಾಗೂ ಅಪಘಾತವಾದ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆಂದು ಸಾಕ್ಷಿ ನುಡಿದಿದ್ದು, ನಿಪಿ-3 ರಿಂದ ನಿಪಿ-6 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-9 ಮತ್ತು ನಿಪಿ-10 ರಲ್ಲಿ ಗಂಗಸ್ವಾಮಯ್ಯ ಅಲಿಯಾಸ್ ಭೀಮಣ್ಣ ನವರ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು :- ಶ್ರೀ. ಕೆ.ಎನ್.ಎ. ವಕೀಲರಿಂದ ಆರೋಪಿ ಪರವಾಗಿ :-**

ಗಂಗಸ್ವಾಮಯ್ಯ ಅಲಿಯಾಸ್ ಭೀಮಣ್ಣನವರು ನನಗೆ ಪರಿಚಯಸ್ಥರು, ಸಾಕ್ಷಿ ಮುಂದುವರೆದು ಆತ್ಮೀಯರಲ್ಲ, ಆದರೆ ಪಕ್ಕದ ಊರಿನವರು ಎಂದು ನುಡಿಯುತ್ತಾರೆ. ನಾನು ನಿಂತ್ತಿದ್ದ ಸ್ಥಳಕ್ಕೂ ಹಾಗೂ ಅಪಘಾತವಾದ ಸ್ಥಳಕ್ಕೂ ಸುಮಾರು 18 ಮೀಟರ್ ಅಂತರವಿರುತ್ತದೆಂದು ನುಡಿಯುತ್ತಾರೆ. ನಾನು ಅಪಘಾತ ಸಮಯದಲ್ಲಿ ಡೈರಿಗೆ ಹಾಲನ್ನು ಹಾಕಿ ಬಂದು ನಿಂತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತದ ಸ್ಥಳದಲ್ಲಿ ಯುಟರ್ನ್ ತೆಗೆದುಕೊಳ್ಳಲು ಜಿಬ್ರಾ ಕ್ರಾಸಿಂಗ್ ಇದೆಯಾ ಎಂದರೆ ಸಾಕ್ಷಿ ಜಿಬ್ರಾ ಕ್ರಾಸಿಂಗ್ ಇದೆ ಎಂದು ನುಡಿಯುತ್ತಾರೆ. ನಿಪಿ-7 ಮತ್ತು ನಿಪಿ-8 ರಲ್ಲಿ ವ್ಯಕ್ತಿಗಳು ನಿಂತ್ತಿರುವ ಜಾಗದಲ್ಲಿ ಜಿಬ್ರಾ ಕ್ರಾಸಿಂಗ್ ಇಲ್ಲ ಎಂದರೆ ಸರಿ. ನೀವು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ, ಅಲ್ಲಿ ವರುಣಾ ಕಾರು ಸಹ ಬಂದು ಅಪಘಾತ ಪಡಿಸಿರುವುದಿಲ್ಲ

**ಸಿ.ಸಿ. ಸಂಖ್ಯೆ: 5827 / 2022**
**ಚಾಸಾ-09 / ಪ್ರಾಸಾ-02**

ಎಂದರೆ ಸರಿಯಲ್ಲ.

2. ಗಂಗಸ್ವಾಮಯ್ಯ ಅಲಿಯಾಸ್ ಭೀಮಣ್ಣ ನವರಿಗೆ ಗಾಡಿ ಓಡಿಸಲು ಬರುತ್ತಿರಲಿಲ್ಲ, ಅವರೆ ಬಿದ್ದು ಅಪಘಾತ ಪಡಿಸಿಕೊಂಡಿದ್ದು, ನೀವು ಗಂಗಸ್ವಾಮಯ್ಯ ಅಲಿಯಾಸ್ ಭೀಮಣ್ಣ ನವರಿಗೆ ಪರಿಚಯಸ್ಥರಿಂದ ಅಪಘಾತ ಪರಿಹಾರ ಕೊಡಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ, ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಚಾಸಾ-1 ರವರಿಗೆ ಅಪಘಾತದ ವಿಚಾರವನ್ನು ಫೋನ್ ಮುಖಾಂತರ ತಿಳಿಸಿರುತ್ತೇನೆಂಬ ವಿಚಾರವು ಸಹ ಸುಳ್ಳು ಎಂದರೆ ಸರಿಯಲ್ಲ. ಗಂಗಸ್ವಾಮಯ್ಯ ಅಲಿಯಾಸ್ ಭೀಮಣ್ಣ ನವರಿಗೆ ವಾಹನ ಚಾಲನ ಪರವಾನಗಿ ಇಲ್ಲದೇ ವಾಹನ ಚಾಲನೆ ಮಾಡಿದ್ದು, ಅಪಘಾತ ಆಗಿರುತ್ತದೆ, ಆದರೆ ನೀವು ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ, ಈ ಮುಂಚೆ ಎಲ್ಲಿಯೂ ನೋಡಿರುವುದಿಲ್ಲ ಎಂದರೆ ಸಾಕ್ಷಿ ಅಪಘಾತವಾದ ಸ್ಥಳದಲ್ಲಿ ನೋಡಿರುತ್ತೇನೆಂದು ನುಡಿಯುತ್ತಾರೆ. ನೀವು ಆರೋಪಿಯನ್ನು ನೋಡದೆ ಇದ್ದರೂ ಸಹ ಪರಿಹಾರ ಹಣ ಕೊಡಿಸುವುದಕ್ಕೆ ಇವರೇ ಆರೋಪಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**